೧೯) ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರು ಮಾದರಿಯಂತೆ ಸೋಮೇಶ್ವರ ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಪ್ರಕೃತಿ ಸುಂದರವಾದ ಜಿಲ್ಲೆ ದಕ್ಷಿಣ ಕನ್ನಡದಲ್ಲಿ, ಬೈಂದೂರು ಕ್ಷೇತ್ರದ ಕೊಲ್ಲೂರು, ಮಾರವಂತೆ, ಬೈಂದೂರು ಬಳಿಯ ಸೋಮೇಶ್ವರ ಇವು ಅತ್ಯಪೂರ್ವವಾದ ನಿಸರ್ಗ ರಮಣೀಯವಾದ ಚೇತೋಹಾರಿ ತಾಣಗಳು. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಹಾಗೂ ಈಚೆಗೆ ರಾಷ್ಟ್ರದಾದ್ಯಂತದಿಂದ ಯಾತ್ರಿಕರು ಬರುವ ಕೊಲ್ಲೂರು ಪಶ್ಚಿಮ ಘಟ್ಟದ ಬುಡದಲ್ಲಿ, ಹಸಿರು ಹಾಸಿನ ಒಡಲಲ್ಲಿ, ಸುರಕ್ಷಿತ ಪುಣ್ಯ ಧಾಮದ ನಡುವಿನಲ್ಲಿ ಕೊಡಚಾದ್ರಿ ಪರ್ವತದ ಬಾಗಿಲಲ್ಲಿ ಕಂಗೊಳಿಸುತ್ತಿದೆ. ಸುಮಾರು ೩೦೦ ಕಿಲೋಮೀಟರ್ ಉದ್ದಕ್ಕೂ ಇಕ್ಕೆಡೆಗಳಲ್ಲಿರುವ ಕಡಲಂ ಮತ್ತು ನದಿಗಳ ನಡುವೆ ಹೆದ್ದಾರಿ ಮಾತ್ರ ಇರುವ ಮಾರವಂತೆ ಬಳಿಯ ಮಾರಸ್ವಾಮಿ, ಹೃನ್ಮನ ತಣಿಸುವ ಅದ್ಭುತ ದೃಶ್ಯವನ್ನೊಳಗೊಂಡು ಬಿಹುಶಃ ವಿಶ್ವದಲ್ಲೇ ವಿಕಮೇವಾದ್ವಿತೀಯ ಸುಂದರ ತಾಣವಾಗಿದೆ. ಸುಂದರ ವಿಹಾರ ಕೇಂದ್ರವಾಗಿ ರೂಪುಗೊಳ್ಳುವ ಅವಕಾಶ ಅಲ್ಲಿದೆ. ಬೆಟ್ಟದ ಬುಡಕ್ಕೆ ಕಡಲಿನಲೆಗಳು ಬಿಡದೆ ಅಪ್ಪಳಿಸುವ ಪ್ರಶಾಂತ ತಾಣ ಬೈಂದೂರಿನ ಸೋಮೇಶ್ವರ, ಇತ್ತೀಚೆಗಂತೂ ಈ ಮೂರೂ ಕಡೆಗಳಲ್ಲಿ ಅನೇಕ ಚಲನಚಿತ್ರಗಳಿಗೆ ಈ ಪರಿಸರದಲ್ಲಿ ಚಿತ್ರೀಕರಣವಾಗಿದೆ. ಲಕ್ಷ ಲಕ್ಷ ಜನ ಚಿತ್ರಮಾಧ್ಯಮ ಮೂಲಕ ನೋಡಿ ಸಂತೋಷಿಸಿದ ಹಲವಾರು ಮಂದಿ ಈ ಸ್ಥಳ ನೋಡಲು ಬರುತ್ತಿದ್ದಾರೆ. ಆದರೆ ಪ್ರವಾಸಿಗಳಿಗೆ ಈ ತಾಣಗಳನ್ನು ಕಾಣಬರುವಾಗ, ಸೂಕ್ತ ವ್ಯವಸ್ಥೆ ಇಲ್ಲದೆ ಪ್ರಯಾಸವಾಗಿದೆ. ಈ ಮೂರು ಸ್ಥಳಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ವಾರ್ತಾ ಮತ್ತು ಪ್ರವಾಸೋದ್ಯಮ ಖಾತೆ ಸಚಿವರ ಪರವಾಗಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಆಚಾರ್ಯರ ಭಾಷಣ ರಮಣೀಯವಾಗಿದೆ. ಫೆಬ್ರವರಿ ೧೯೮೭ರಲ್ಲಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ದೇಶೀಯ ಹಾಗೂ ಅಂತರಾಷ್ಟ್ರೀಯ ಪ್ರವಾಸಿಗಳ ಅನುಕೂಲಕ್ಕಾಗಿ, ಅವರು ಪಶ್ಚಿಮ ಘಟ್ಟಗಳಲ್ಲಿ ಸಂಚರಿಸಿ, ದಕ್ಷಿಣ ಕನ್ನಡ ಜಿಲ್ಲೆಯ ಮಾರವಂತೆ, ಪುಲ್ಟಿ, ಉಳ್ಳಾಲ ಇವುಗಳನ್ನು ಸಮುದ್ರ ತೀರದ ವಿಶ್ರಾಂತಿಧಾಮಗಳಾಗಿ ಗುರುತಿಸಿರುತ್ತಾರೆ. ಇವು ಕೇಂದ್ರ ಸರ್ಕಾರದ ಸಹಾಯನುದಾನ ಯೋಜನೆಗಳಾಗಿರುತ್ತವೆ. ರಾಜ್ಯ ಸರ್ಕಾರವು ಮಾರವಂತೆ ಯೋಜನೆಯ ಬಗ್ಗೆ ಅಂದಾಜು ಪಟ್ಟಿ ನೀಲಿ ನಕಾಶೆಗಳನ್ನು ಸಿದ್ಧಪಡಿಸಿದ್ದು ಅದರ ಅಂದಾಜು ವೆಚ್ಚವು ರೂ. ೪೪.೨೩ ಲಕ್ಷಗಳು. ಇದನ್ನು ಕೇಂದ್ರ ಸರ್ಕಾರದ ಪಾಲುದಾರಿಕೆಗಾಗಿ ಕಳುಹಿಸಲಾಗುತ್ತಿದೆ. ಇದಕ್ಕೆ ಬೇಕಾದ ಸ್ಥಳ ಸಾಮಾನ್ಯ ೫ ಎಕರೆಗಳನ್ನು ಕಂದಾಯ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊಲ್ಲೂರು ಪ್ರವಾಸಿ ಕ್ಷೇತ್ರವೆಂದು ಗುರುತಿಸಲಾಗಿದೆ. ಇಲಾಖೆಯು ಸಿದ್ಧಪಡಿಸಿದ ಪಟ್ಟಿಯಲ್ಲಿ ಇದನ್ನು ಅಳವಡಿಸಲಾಗಿದೆ. ರಾಜ್ಯ ಸರ್ಕಾರದಿಂದ ಇಲಾಖೆಗೆ ಹೆಚ್ಚಿನ ಅನುದಾನ ಒದಗಿಸಿದಾಗ ಇದನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲಾಗುವುದು.

೨೦) ಹೊಸನಗರ ತಾಲ್ಲೂಕು ಪಂಚಾಯಿತಿ ಕಾರ್ಯದರ್ಶಿ ಶ್ರೀ ಪಾರ್ಥಸಾರಥಿಯವರ ಮೇಲಿನ ಅವ್ಯವಹಾರದ ಆಪಾದನೆ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಪಂಚಾಯಿತಿ ಕಾರ್ಯದರ್ಶಿ ಪಾರ್ಥಸಾರಥಿ ಎಂಬುವರ ಬಗ್ಗೆ ಈ ಹಿಂದೆ ಗ್ರಾಮಾಭಿವೃದ್ಧಿ ಮಂತ್ರಿಗಳಿಗೆ ಜಿಲ್ಲಾಪರಿಷತ್ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯದರ್ಶಿಯವರಿಗೆ ಅವರ ಮಾಡುತ್ತಿರುವ ಅವ್ಯವಹಾರ ಹಾಗೂ ಅತ್ಯಾಚಾರದ ಬಗ್ಗೆ ಪತ್ರ ಬರೆದಿರುತ್ತೇನೆ. ಅಲ್ಲದೆ ತಾಲ್ಲೂಕು ಪಂಚಾಯಿತಿಯ ನಿರ್ಣಯವನ್ನು ಕಳಿಸಿರುತ್ತೇನೆ ಶಾಸಕನಾಗಿ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷನಾಗಿ ಬರೆದಿರುವ ನನ್ನ ಪತ್ರಕ್ಕೆ ಸಿಗುವ ಮಾನ್ಯತೆ ಸರ್ಕಾರದ ವತಿಯಿಂದ ಆಗುತ್ತಿರುವ ಬೇಜವಾಬ್ದಾರಿತನ ಎಂದು ಹೇಳಬೇಕಾಗುತ್ತದೆ. ಸದರಿ ತಾಲ್ಲೂಕು ಪಂಚಾಯಿತಿ ಕಾರ್ಯದರ್ಶಿಯ ಅವಧಿಯಲ್ಲಿ ಗೋಡೌನಲ್ಲಿ ಇಡಲಾಗಿದ್ದ ಅನೇಕ ಪಂಪ್‌ಸೆಟ್‌ಗಳನ್ನು ಹಾಗೂ ಪಂಪ್‌ಸೆಟ್ ಸ್ಟಾರ್ಟರ್‌ಗಳನ್ನು